ಶ್ರೀ ಬ್ಲೇಸಿಯಸ್ ಎಂ. ಡಿಸ್ಕೋಜ:- ಎರಡು ಎಕರೆ ಸ್ಥಳವನ್ನು ಸರ್ಕಾರಕ್ಕೆ ಒದಗಿಸಿದ್ದು ಗೊತ್ತಾದ ನಂತರ, ಆದಷ್ಟು ಬೇಗ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬಿ.ಜಿ.ಎಲ್. ಪದವಿಯ ಮುಂದುವರಿಕೆ

133 (1161). ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಎಲ್.ಎಲ್.ಬಿ. ಪದವಿ ವ್ಯಾಸಂಗದಲ್ಲಿ 2 ವರ್ಷಗಳನ್ನು ಮುಕ್ತಾಯಗೊಳಿಸಿದ ಕಾನೂನು ವಿದ್ಯಾರ್ಥಿಗಳಿಗೆ ಬಿ.ಜಿ.ಎಲ್. ಪದವಿಯನ್ನು ನೀಡುವ ಪದ್ಧತಿ ಯಾವ ಅವಧಿಯಿಂದ ಪ್ರಾರಂಭವಾಯಿತು?

ಆ) ಇದುವರೆಗೂ ಎಷ್ಟು ಸಂಖ್ಯೆಯ ವಿದ್ಯಾರ್ಥಿಗಳಿಗೆ ಬಿ.ಜಿ.ಎಲ್. ಪದವಿಯನ್ನು ನೀಡಲಾಗಿದೆ?

ಇ) ಬಿ.ಜಿ.ಎಲ್. ಪದವಿಯನ್ನು ನೀಡುತ್ತಿರುವ ಪದ್ಧತಿಯನ್ನು ನಿಲ್ಲಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ಅದನ್ನು ಯಾವ ದಿನಾಂಕದಿಂದ ನಿಲ್ಲಿಸಲಾಗಿದೆ ಹಾಗೂ ಅದಕ್ಕೆ ಕಾರಣಗಳೇನು?

ಉ) ಬಿ.ಜಿ.ಎಲ್. ಪದವಿಯನ್ನು ಹೊಂದಿರುವ ವಿದ್ಯಾರ್ಥಿಗಳು ಮೂರನೇ ವರ್ಷದ ಹಾಜರಿಯನ್ನು ಪೂರ್ಣಗೊಳಿಸಿದ್ದಲ್ಲಿ 3ನೇ ವರ್ಷದ ಪದವಿ ಪರೀಕ್ಷೆಗೆ ಹಾಜರಾಗಿ ಎಲ್.ಎಲ್.ಬಿ. ಪದವಿಯನ್ನು ಪಡೆಯಲು ಅರ್ಹರೆ?

ಊ) ಹಾಗಿಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಅಂತಿಮ ಸಾಲನ್ನು ಮುಕ್ತಾಯಗೊಳಿಸಿ ಕಾನೂನು ಪ್ರಕ್ರಿಯೆಗಾಗಿ ಎಲ್.ಎಲ್.ಬಿ. ಪದವಿ ಪಡೆಯಲು ಸರ್ಕಾರ ಅನುಮತಿಸುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) 1964ನೇ ವರ್ಷದಲ್ಲಿ.

ಆ) ಲಭ್ಯವಿಲ್ಲ.

ಇ) ಹೌದು.

ಈ) 1981-82 ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಬಿ.ಜಿ.ಎಲ್. ಪದವಿಯನ್ನು ಅಂಚೆ ಮತ್ತು ತೆರಪಿನ ವ್ಯಾಸಂಗ ಮುಖಾಂತರ ಅಳವಡಿಸುವ ದೃಷ್ಟಿಯಿಂದ.

ಉ) ಹೌದು.

ಊ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಉಪಾಧ್ಯಕ್ಷಣೆಯವರೆ, Number of students passed B.G.L. ಎಂದು ಕೇಳಿದ್ದಕ್ಕೆ ಉತ್ತರ

ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಎರಡನೆಯದಾಗಿ, ಬಿಜಿಎಲ್ ಹೋಲ್ಡರ್ಸ್ ಫೈನಲ್ ಡಿಗ್ರಿ ತೆಗೆದುಕೊಳ್ಳುವುದಕ್ಕೆ ಪರ್ಮಿಶನ್ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ವಿಶ್ವವಿದ್ಯಾಲಯದ ಸುತ್ತೋಲೆಯಲ್ಲಿ 10 ವರ್ಷಗಳ ಡಿಸ್‌ಕಂಟಿನ್ಯೂ ಆಗಿದ್ದರೆ, ಅವರು ಮತ್ತೆ ಮೊದಲನೆ ವರ್ಷ ತೆಗೆದುಕೊಳ್ಳಬಹುದು, ಎರಡನೆ ಮತ್ತು ಮೂರನೆ ವರ್ಷ ತೆಗೆದುಕೊಳ್ಳಲಾಗುವುದಿಲ್ಲವೆಂದು ಆದೇಶವಿದೆ. ಆ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಂಡು, ಅವರು ಫೈನಲ್ ಇಯರ್ ಎಲ್.ಎಲ್.ಬಿ. ತೆಗೆದುಕೊಳ್ಳುವುದಕ್ಕೆ ಪರ್ಮಿಶನ್ ಕೊಡುವುದಕ್ಕಾಗುತ್ತದೆಯೇ? ಎಂದು ಕೇಳುತ್ತಿದ್ದೇನೆ.

ಶ್ರೀ ಜ. ಪುಟ್ಟಸ್ವಾಮಿಗೌಡ (ಶಿಕ್ಷಣ ಮಂತ್ರಿಗಳ ಪರವಾಗಿ) :- ಮಾನ್ಯ ಉಪಾಧ್ಯಕ್ಷಣೆಯವರೆ, ಈ ಬಿ.ಜಿ.ಎಲ್ ಯೋಜನೆಯು 8-4-1982ರಲ್ಲಿಯೆ ರದ್ದಾಗಿರತಕ್ಕದ್ದು. ಇದನ್ನು ಬೆಂಗಳೂರು ವಿಶ್ವವಿದ್ಯಾಲಯದವರು ತಮ್ಮ ಸಿಂಡಿಕೇಟ್ ಮೀಟಿಂಗ್‌ನಲ್ಲಿ ಒಮ್ಮತದಿಂದ ನಿರ್ಣಯವನ್ನು ಮಾಡುವುದರ ಮೂಲಕ ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಮತ್ತು ಇದನ್ನು ಅಂಚೆ ಮತ್ತು ತೆರಪಿನ ವ್ಯವಸ್ಥೆಯ ಮೂಲಕ ಮಾಡಿಕೊಳ್ಳಲು ಅವಕಾಶವನ್ನು

ಮಾಡಿಕೊಡುವ ನಿರ್ಣಯವನ್ನು ಕೂಡ ತೆಗೆದುಕೊಂಡಿದ್ದಾರೆ. ಆದರೂ ಕೂಡ ಬೆಂಗಳೂರು ವಿಶ್ವವಿದ್ಯಾಲಯ ಆ ಕಾರ್ಯವನ್ನು ಮಾಡಲಿಲ್ಲ ಆದರೆ ಮೈಸೂರು ವಿಶ್ವವಿದ್ಯಾಲಯದವರು ಆ ಕಾರ್ಯವನ್ನು ಮಾಡಿಕೊಂಡು ಬಂದಿದ್ದಾರೆ. 10ವರ್ಷದ ಹಿಂದೆ ಬಿ.ಜಿ.ಎಲ್. ನ್ನು ಓದಿರತಕ್ಕವರು ಈಗ ಎಲ್.ಎಲ್.ಬಿ. ಕೋರ್ಸ್‌ನ್ನು ಓದತಕ್ಕದಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅವಕಾಶವನ್ನು ಕೊಡಬೇಕೆಂಬುದು ಮಾನ್ಯ ಸದಸ್ಯರ ಒತ್ತಾಯವಾಗಿದೆ. ಬಹುಶಃ ವಿಶ್ವವಿದ್ಯಾಲಯದವರೆ ಆ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂಚೆ ಮತ್ತು ತೆರಪಿನ ಕೋರ್ಸ್‌ನಲ್ಲಿ ಓದಿದಂಥ ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಿ.ಜಿ.ಎಲ್. ಕೋರ್ಸ್‌ಗೆ ಸೇರಿಕೊಳ್ಳುವುದಕ್ಕೆ ಬಹುಶಃ ಅವಕಾಶ ಸಿಗುವುದಿಲ್ಲವೆಂದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಈ ಕಾರಣದಿಂದ 10ವರ್ಷಗಳು ಕಳೆದ ನಂತರ ಸೇರಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಬೆಂಗಳೂರು ವಿಶ್ವವಿದ್ಯಾಲಯದವರು ಈಗಾಗಲೇ ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಆದರ ಬಗ್ಗೆ ವಿಶ್ವವಿದ್ಯಾಲಯದವರು ಕ್ರಮತೆಗೆದುಕೊಳ್ಳಬೇಕೆ ಹೊರತು ಸರ್ಕಾರದವರು ತೆಗೆದುಕೊಳ್ಳಲು ಕಷ್ಟವಾಗುತ್ತದೆ.

ಶ್ರೀ ಎಂ ವಿ. ವೆಂಕಟಪ್ಪ:- ಉಪಾಧ್ಯಕ್ಷಣೆಯವರೆ, ಮೂರನೆ ವರ್ಷ ಆವರು ಪೂರ್ತಿಯಾಗಿ ಹಾಜರಾತಿಯನ್ನು ಹಾಕಿ ಎಲ್ಲವನ್ನು ಮಾಡಿದಮೇಲೆ 10ವರ್ಷಗಳಾದಮೇಲೆ ಅವನು ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಅವಕಾಶವಿಲ್ಲ ಎಂದಿದ್ದಾರೆ. ಅದು ಮೈಸೂರು ವಿಶ್ವವಿದ್ಯಾಲಯದಲ್ಲಿರಬಹುದು ಆದರೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಏಕೆ ಇಲ್ಲ ಈಗಲೂ ಸಹ ತಾವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಡೈರೆಕ್ಷನ್ ಕೊಟ್ಟರೆ ಅವರು ಮಾಡುತ್ತಾರೆ. ದಯಮಾಡಿ ಈ ರೀತಿ ಮಾಡಿ. ಬಹಳ ಜನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಸರ್ಕಾರ ಅಂಚೆ ಮತ್ತು ತೆರಪಿನ ಕೋರ್ಸನ ಮೂಲಕ ಇದನ್ನು ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ 1981ರಲ್ಲಿ ಈ ಆದೇಶವನ್ನು ಕೊಟ್ಟಿತ್ತು. ಆದರೂ ಕೂಡ ಅವರು ಅದನ್ನು ಅನುಷ್ಠಾನಕ್ಕೆ ತರಲಿಲ್ಲ, ಮತ್ತೊಮ್ಮೆ ಸನ್ಮಾನ್ಯ ಸದಸ್ಯರು ಹೇಳಿದಂತೆ ಅವರಿಗೆ ಎಚ್ಚರಿಕೆಯನ್ನು ನೀಡುತ್ತೇವೆ.

ಶ್ರೀ ಎಸ್.ಎಂ. ಯಾಹ್ಯ:- ಉಪಾಧ್ಯಕ್ಷಣೆಯವರೆ, ಇದು ಬಹಳ ಪ್ರಾಮುಖ್ಯವಾದ ಲೀಗಲ್ ಕೋರ್ಸ್ ಆಗಿದೆ. Jurisprudence ವಿಚಾರದಲ್ಲಾಗಲಿ, Constitutional ವಿಚಾರದಲ್ಲಾಗಲಿ, rules making, fundamental principles ವಿಚಾರದಲ್ಲಾಗಲಿ ಇದರ ತತ್ವಗಳು ತಿಳುವಳಿಕೆಗೆ ಬರುತ್ತದೆ. ಆದುದರಿಂದ ಬಹಳಷ್ಟು ಸರ್ಕಾರಿ ನೌಕರರುಗಳು ಬೆಳಿಗ್ಗೆ ಕಾಲೇಜಿಗೊ ಅಥವಾ ಸಂಜೆ ಕಾಲೇಜಿಗೊ ಹೋಗಿ ಪಾಠವನ್ನು ಕಲಿತು ಅವರ ಗುಣಮಟ್ಟವನ್ನು ಹೆಚ್ಚು ಮಾಡಲು ಪ್ರಯತ್ನಿಸಿದ್ದಾರೆ. ಆದುದರಿಂದ ಸರ್ಕಾರ ಏಕೆ ಈ ಬಿ.ಜಿ.ಎಲ್ ಕೋರ್ಸ್‌ನ್ನು ಪುನಃ ಪ್ರಾರಂಭ ಮಾಡಬಾರದು, ರೀ-ಇಂಟ್ರಡ್ಯೂಸ್ ಮಾಡುವುದರಿಂದ ಸರ್ಕಾರಕ್ಕೆ, ವಿಶ್ವವಿದ್ಯಾಲಯಕ್ಕೆ ಏನೂ ತೊಂದರೆಯಾಗುವುದಿಲ್ಲ. ರೀ-ಇಂಟ್ರಡ್ಯೂಸ್ ಮಾಡುತ್ತೀರೊ ಅಥವಾ ಇಲ್ಲವೊ ಎಂಬುದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯ ಪ್ರಶ್ನೆ ಎಂದರೆ, 10 ವರ್ಷದ ಹಿಂದೆ ಯಾರೆಲ್ಲ ಮೂರು ವರ್ಷದ ಕೋರ್ಸ್‌ನಲ್ಲಿ ಇದ್ದರೋ ಅವರು ಪುನಃ ಎಲ್.ಎಲ್.ಬಿ.ಯ ಪರೀಕ್ಷೆಗೆ ಹಾಜರಾಗಬೇಕೆಂದು ಹೇಳಿದ್ದಾರೆ. ಇದರಿಂದ 10 ವರ್ಷದ ಹಿಂದೆ ಹಾಜರಾಗಿದ್ದ ಕಲವರಾದರೂ ಇದ್ದರೆ ಅವರಿಗೆ ಅನ್ಯಾಯವಾಗುತ್ತದೆ. ಆದುದರಿಂದ ಇದನ್ನು ಸಡಿಲ ಮಾಡಿ 15ವರ್ಷದ ವರೆಗೂ ಮಾಡಿ ಅಥವಾ ಯಾರೆಲ್ಲ ಈ ರೀತಿ ಉಳಿದಿದ್ದಾರೆ ಅವರಿಗೆ ಎಲ್.ಎಲ್.ಬಿ. ಕೋರ್ಸ್‌ನ್ನು ತೆಗೆದುಕೊಳ್ಳಲು ಒಂದು ಅವಕಾಶವನ್ನು ಮಾಡಿಕೊಡುವಂತೆ ಮಾಡಬೇಕು. ಇದರ ಬಗ್ಗೆ ನೀವು ಸರಿಯಾದ ಉತ್ತರವನ್ನು ಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಉಪಾಧ್ಯಕ್ಷಣೆಯವರೆ, ಈಗಾಗಲೇ ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಜಿ.ಎಲ್. ಕೋರ್ಸನ ಬಗ್ಗೆ ಅಂಚೆ ಮತ್ತು ತೆರಪಿನ ವ್ಯವಸ್ಥೆ ನಡೆಯುತ್ತಿದೆ. ಹಾಗೆಯೇ ಬೆಂಗಳೂರು ವಿಶ್ವವಿದ್ಯಾಲಯದಲ್ಲಿಯೂ ಕೂಡ ಅದನ್ನು ಆರಂಭ ಮಾಡಬೇಕೆಂದು ಹಿಂದೆಯೇ ಸರ್ಕಾರ ಆದೇಶವನ್ನು ಕೊಟ್ಟಿದೆ ಎಂಬ ಮಾತನ್ನು ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ.

SRI S.M. YAHYA:- The correspondence course is quite different.

ಶ್ರೀ ಹೆಚ್.ಎಂ. ರೇವಣ್ಣ:- ಉಪಾಧ್ಯಕ್ಷಣೆಯವರೆ, ಎರಡು ವರ್ಷದ ಕೋರ್ಸನ್ನು ಅವರು ಮುಗಿಸಿದ್ದಾರೆ. 3ನೇ ವರ್ಷದ ಕೋರ್ಸ್ ಬಾಕಿ ಉಳಿದಿದೆ. ಅವರು ಅಂತಿಮ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆಂದರೆ ಮೊದಲನೆಯ ವರ್ಷಕ್ಕೆ ಹೋಗಿ ಎಂದು ಹೇಳುತ್ತಾರೆ. ಅವರಿಗೆ ಮೊದಲಿನಿಂದ ಎಲ್.ಎಲ್.ಬಿ. ಯನ್ನು ಓದಲು ಹೇಳುವುದು ಸರಿಯಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಏನು ವ್ಯವಸ್ಥೆ ಇದೆ ಅದನ್ನು ಪ್ರಸ್ತಾಪ ಮಾಡಿ, ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ವಿರಾಜಪೇಟೆ ತಾಲ್ಲೂಕಿನಲ್ಲಿರುವ ಪದವಿ ಪೂರ್ವ ಮಹಾ ವಿದ್ಯಾಲಯಗಳು

134 (652). ಶ್ರೀಮತಿ ಸುಮವಸಂತ (ವಿರಾಜಪೇಟೆ):- ಮಾನ್ಯ ಶಿಕ್ಷಣ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

1) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನಲ್ಲಿ ಇರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

2) ಈ ಕಾಲೇಜುಗಳಿಗೆ ಮಂಜೂರಾದ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು? (ಕಾಲೇಜುವಾರು ಹುದ್ದೆವಾರು ಮಾಹಿತಿ ಒದಗಿಸುವುದು)

3) ಕೊರತೆ ಇರುವ ಉಪನ್ಯಾಸಕರ ಸಂಖ್ಯೆ ಎಷ್ಟು? (ಹುದ್ದೆವಾರು ಮಾಹಿತಿ ನೀಡುವುದು)

4) ಕೊರತೆ ಎಷ್ಟು ವರ್ಷದಿಂದ ಇರುವುದು?

5) ಕೊರತೆಯನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

1) ಎರಡು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುತ್ತದೆ.

2) ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಪೊನಂಪೇಟೆ ಉಪನ್ಯಾಸಕರು -10.
ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ವಿರಾಜಪೇಟೆ ಉಪನ್ಯಾಸಕರು -13.
ಒಟ್ಟು 23

3) ಒಟ್ಟು 4 ಹುದ್ದೆಗಳ ಕೊರತೆಯಿದೆ.
1) ಪೊನಂಪೇಟೆ : 1) ರಸಾಯನಶಾಸ್ತ್ರ
2) ಭೂಗೋಳಶಾಸ್ತ್ರ.
2) ವಿರಾಜಪೇಟೆ : 1) ರಸಾಯನಶಾಸ್ತ್ರ.
2) ಜೀವಶಾಸ್ತ್ರ.

4) ಒಂದರಿಂದ ಮೂರು ವರ್ಷಗಳಿಂದ ಖಾಲಿ ಇದೆ.

5) ನೇರನೇಮಕಾತಿಗೆ ನಿಯಮಗಳನ್ನು ರೂಪಿಸಲಾಗುತ್ತಿದೆ.

ಶ್ರೀಮತಿ ಸುಮಾವಸಂತ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಎಷ್ಟು ಜನ ಉಪನ್ಯಾಸಕರ ಕೊರತೆ ಇದೆಯೆಂದು ನಮ್ಮ ತಾಲ್ಲೂಕಿನ ಬಗ್ಗೆ ಕೇಳಿದ್ದೇನೆ. ಆದರಲ್ಲಿ ಅವರು ಮೂರು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆಯೆಂದು ವರದಿ ಕೊಟ್ಟಿದ್ದಾರೆ. ಕನ್ನಡ ಇಂಗ್ಲೀಷ್ ಸಬ್‌ಜೆಕ್ಟ್ ಆದರೆ ಹೇಗೋ ಓದಿಕೊಂಡು ಪರೀಕ್ಷೆಗೆ ಹೋಗಬಹುದು. ಒಳ್ಳೆಯ ಸಬ್‌ಜೆಕ್ಟ್‌ಗಳಾದ ರಸಾಯನಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಜೀವಶಾಸ್ತ್ರ ಇಂತಹ ಉಪನ್ಯಾಸಕರ ಕೊರತೆ ಇದೆ. ಸರ್ಕಾರಿ ಕಾಲೇಜುಗಳಿಗೆ ಯಾವ ವಿದ್ಯಾರ್ಥಿಗಳು ಬರುತ್ತಾರೆಂದು ತಮಗೆ ಗೊತ್ತು. ಈ ರೀತಿಯಾದರೆ ಅವರು ಹೇಗೆ ಓದಿ ಉತ್ತಮ ಫಲಿತಾಂಶ ತೆಗೆಯಲಿಕ್ಕೆ ಸಾಧ್ಯವೆಂದು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳ ಪರವಾಗಿ):- ಸನ್ಯಾನ್ಯ ಉಪಾಧ್ಯಕ್ಷಿಣಿಯವರೇ, ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆ ಕೊರತೆ ಇರುವುದು ನಿಜ. ಇದನ್ನು ಮನಗೊಂಡು ಇತ್ತೀಚೆಗೆ ಅದರ ಮೇಲೆ ಇದ್ದಂತಹ ಆರ್ಥಿಕ ನಿರ್ಬಂಧವನ್ನು ರದ್ದು ಮಾಡಿ ಸಚಿವಸಂಪುಟ ಸಭೆ ಈಗಾಗಲೇ ಸಿ ಆಂಡ್ ಆರ್ ರೂಲ್ಸ್‌ನ್ನು ಕೂಡ ಒಪ್ಪಿ ತೀರ್ಮಾನವನ್ನು ತೆಗೆದುಕೊಂಡಿದೆ. ಸುಮಾರು 776 ಉಪನ್ಯಾಸಕರ ಅಗತ್ಯತೆ ನಮ್ಮ ಕಾಲೇಜುಗಳಿಗೆ ಇದೆಯೆಂದು ಸರ್ಕಾರಕ್ಕೆ ಗೊತ್ತಾಗಿದೆ. ಸಚಿವ ಸಂಪುಟದ ತೀರ್ಮಾನ ಆಗಿ ಈಗಾಗಲೇ ಆದು ರಾಜ್ಯಪಾಲರ ಒಪ್ಪಿಗೆಗೆ ಕೂಡ ಹೋಗಿದೆ. ಒಂದೆರಡು ದಿನಗಳಲ್ಲಿ ಆದು ಒಪ್ಪಿಗೆಯಾಗಿ